**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**

**ದಿಃ-08-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿಸವಾಲು ಃ ವಾದಿ ಪರ ಶ್ರೀ. ಎನ್.ಎಸ್.ಆರ್ ವಕೀಲರಿಂದ ಃ**

10. ನಾನು ಒತ್ತುವರಿ ಮಾಡಿದ ಕಟ್ಟಿದ್ದ ಒಂದೂವರೆ ಫೀಟ್ ಜಾಗದ ಕಟ್ಟಡವನ್ನು ವಾದಿಯವರೇ ಹೊಡೆದು ಹಾಕಿದಲ್ಲಿ ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿಯು ನಾನು ಯಾವುದೇ ಜಾಗವನ್ನು ಒತ್ತುವರಿ ಮಾಡಿ ಕಟ್ಟಡವನ್ನು ಕಟ್ಟಿಲ್ಲ ಎಂದು ನುಡಿಯುತ್ತಾರೆ. ವಾದಿಯವರು ನಾನು ಒತ್ತುವರಿ ಮಾಡಿ ಕಟ್ಟಡ ಕಟ್ಟಿದ್ದೇನೆ ಎಂದು ಬಿಬಿಎಂಪಿ ಮುಂದೆ ದೂರನ್ನು ದಾಖಲಿಸಿದ್ದು ಆ ಬಗ್ಗೆ ನಾನು ಒತ್ತುವರಿ ಮಾಡಿ ಕಟ್ಟಡ ಕಟ್ಟಿಲ್ಲ ಎಂದು ದಾಖಲೆಗಳನ್ನು ನೀಡಿದ್ದಿರೀಯೇ ಎಂದು ಕೇಳಿದಾಗ ಸಾಕ್ಷಿಯು ನನ್ನ ಮೇಲೆ ಬಿಬಿಎಂಪಿ ಮುಂದೆ ಯಾವುದೇ ದೂರನ್ನು ಕೊಟ್ಟಿಲ್ಲ ಮತ್ತು ಅವರು ಕೊಡದೇ ಇದ್ದುದ್ದರಿಂದ ನಾನು ದಾಖಲೆ ಕೊಡುವ ಪ್ರಶ್ನೆ ಬರುವುದಿಲ್ಲ ಎಂದು ನುಡಿಯುತ್ತಾರೆ.

11. ನಾನು ಮನೆ ಕಟ್ಟುವ ಸಂದರ್ಭದಲ್ಲಿ ವಾದಿಯವರು ಬಿಬಿಎಂಪಿಗೆ ಮತ್ತು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿ ನನಗೆ ನೋಟೀಸು ಹೊರಡಿಸಿದ್ದರು ಎಂದರೆ ಸರಿಯಲ್ಲ. ಆಸ್ತಿಗೆ ಸಂಬಂಧಿಸಿದಂತೆ ನನ್ನ ಮೇಲೆ ವಾದಿಯವರು ಯಾವುದೇ ದೂರನ್ನು ನೀಡಿರುವುದಿಲ್ಲ ಮತ್ತು ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಪ್ರಕರಣ ಇರುವುದಿಲ್ಲ.

12. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಿದ್ದು ಅದರಲ್ಲಿ ಕಾಣುವ ಜಾಗವೇ ತಕರಾರಿನ ವಾದ ಪತ್ರದ ಸ್ವತ್ತು ಎಂದರೆ ಸಾಕ್ಷಿ ಅದನ್ನು ಪರಾಂಬರಿಸಿ ಅದು ನನಗೆ ಯಾವುದು ಎಂದು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

13. ನಿ.ಪಿ.6 ರಲ್ಲಿ ಕಂಡುಬರುವ ಫೋಟೋ ಮತ್ತು ಈಗ ತೋರಿಸಿದ ಫೋಟೋ ಒಂದೇ ಎಂದರೆ ಸಾಕ್ಷಿ ಅದನ್ನು ಪರಾಂಬರಿಸಿ ಅದು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಈಗ ತೋರಿಸಿದ ಫೋಟೋವು ನಿ.ಪಿ.6 ಕ್ಕೆ ಉತ್ತರ ಪೂರ್ವಕ್ಕೆ ಮುಖ ಮಾಡಿ ಇರುವ ಪ್ಯಾರಾಪಟ್ ವಾಲ್ ನ್ನು ತೋರಿಸುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.3 ರಿಂದ 5 ಛಾಯಾ ಚಿತ್ರಗಳನ್ನು ನನಗೆ ಅನುಕೂಲವಾಗುವ ತರಹ ತೆಗೆದು ಹಾಕಿದ ದಾಖಲೆಗಳು ಎಂದರೆ ಸರಿಯಲ್ಲ. ನಾನು ಅವರ ಪ್ಯಾರಾಪಟ್ ವಾಲಿಗೆ ತಾಗಿಸಿ ಕಟ್ಟಡ ಕಟ್ಟುವಾಗ ಅವರು ತಕರಾರು ಮಾಡಿದ್ದರು ಎಂದರೆ ಸರಿಯಲ್ಲ.

14. ವಾದಿಯವರು ತಮ್ಮ ಮನೆಯನ್ನು ಕಟ್ಟುವಾಗ ನಮ್ಮ ಜಾಗವನ್ನು ಒತ್ತುವರಿ ಮಾಡಿ ನಮ್ಮ ಪ್ಯಾರಾಪಟ್ ವಾಲಿಗೆ ಒತ್ತುವರಿ ಮಾಡಿ ಕಟ್ಟಿದ್ದಾರೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿದ್ದೇನೋ ಇಲ್ಲವೋ ನನಗೆ ನೆನಪಿಲ್ಲ. ಸಾಕ್ಷಿಗೆ ಈಗ ಒಂದು ಛಾಯಾ ಚಿತ್ರವನ್ನು ತೋರಿಸಿ ಈ ಮನೆ ನಿಮ್ಮದೇ ಎಂದು ಕೇಳಿದಾಗ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಅದೊಂದು ವಿದ್ಯುನ್ಮಾನ ದಾಖಲೆಯಾಗಿದ್ದರಿಂದ ವಾದಿ ವಕೀಲರು ಸಿಡಿಯನ್ನು ಹಾಜರು ಮಾಡದೇ ಇದ್ದುದ್ದರಿಂದ ಅದನ್ನು ನಿಶಾನೆಗೊಳಪಡಿಸಲಾಗಿರುವುದಿಲ್ಲ. ಸಾಕ್ಷಿಗೆ ಈಗ ಇನ್ನೊಂದು ಛಾಯಾ ಚಿತ್ರವನ್ನು ತೋರಿಸಿ ಈ ಛಾಯಾ ಚಿತ್ರದಲ್ಲಿ ತೋರುವ ಮನೆಯು ನಿಮ್ಮ ಮನೆಯನ್ನು ಕಟ್ಟುತ್ತಿರುವಾಗಿನ ಛಾಯಾ ಚಿತ್ರ ಎಂದರೆ ಆ ಬಗ್ಗೆ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

15. ನನಗೆ ಈಗ ತೋರಿಸಿದ ಛಾಯಾ ಚಿತ್ರಗಳನ್ನು ನಾನು ಗುರುತಿಸಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಒತ್ತುವರಿ ಮಾಡಿದ ಜಾಗವನ್ನು ಹೊಡುದು ಹಾಕಿದರೆ ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿಯು ನನ್ನ ಜಾಗವನ್ನು ಅಳತೆ ಮಾಡಿ ನೋಡಿ ನಾನು ಅಳತೆ ಬಿಟ್ಟು ಹೋದರೆ ಹೊಡೆದು ಹಾಕಲು ನನಗೆ ಯಾವುದೇ ಅಭ್ಯಂತರವಿಲ್ಲ ಎಂದು ನುಡಿಯುತ್ತಾರೆ.

**<u>ಮರು ವಿಚಾರಣೆ ಃ</u>** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**